ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್ **995/2023**

ಸಾಕ್ಷಿಯ ಹೆಸರು : ಚಂದ್ರಾನಾಯಕ್ ಸಿ.ಡಬ್ಲ್ಯು 3
ತಂದೆಯ ಹೆಸರು : ಸೇವ್ಯಾನಾಯಕ್ ಪಿ.ಡಬ್ಲ್ಯು 2
ವಯಸ್ಸು : 60 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಬೇಲೇನಹಳ್ಳಿ ತಾಂಡ್ಯ

ದಿನಾಂಕಃ**03-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಆರೋಪಿ ನಮ್ಮದೇ ಊರಿನವರು ಇರುತ್ತಾರೆ. ಚಾಸಾ-2 ಇವರ ಪರಿಚಯ ಇದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ, ಈಗ ಕೆಲವು ದಿನಗಳ ಹಿಂದೆ ಪೊಲೀಸರು ಊರಿಗೆ ಬಂದಾಗ ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು, ಅದರಲ್ಲಿ ಏನು ಬರೆದಿದ್ದಾರೆ ಮತ್ತು ಯಾವ ಕಾರಣಕ್ಕೆ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ತಿಳಿಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯ ಸಹಿ ಇರುವ ದಾಖಲೆ ಜಪ್ತಿ ಪಂಚನಾಮೆ ಆಗಿದ್ದು ಅದನ್ನು ನಿ.ಪಿ-1 ಎಂದು, ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಪೊಟೋದಲ್ಲಿ ನಾನು ಇದ್ದೇನೆ. ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಸ.ಸ.ಅ ರರಿಂದಃ

ದಿಃ 16-11-2022 ರಂದು ಸಂಜೆ 6-00 ಗಂಟೆ ಸಮಾರಿಗೆ ನಾನು ಮತ್ತು ಚಾಸಾ-2 ರವರು ರಸ್ತೆಯ ಬದಿಯಲ್ಲಿ ನಿಂತಿರುವಾಗ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಸಂಗ್ರಹ ಮಾಡಿ ಮಾರಾಟ ಮಾಡುತ್ತಿದ್ದಾನೆ ಎಂಬ ತಮಗೆ ಬಂದ ಮಾಹಿತಿಯನ್ನು ಚಾಸಾ-1 ರವರು ನನಗೆ ತಿಳಿಸಿ ನನ್ನನ್ನು ಮತ್ತು ಚಾಸಾ-2 ಇವರನ್ನುಪಂಚನಾಗಿ ಕಾರ್ಯ ನಿರ್ವಹಿಸಲು ಕೇಳಿದಾಗ ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ಅವರೊಂದಿಗೆ ಇಲಾಖಾ ವಾಹನದಲ್ಲಿ ಹೋಗುತ್ತಿರುವಾಗ ಆರೋಪಿಯು ತನ್ನ ಕೈಯಲ್ಲಿ ಒಂದು ಚೀಲವನ್ನು ಹಿಡಿದುಕೊಂಡು ಹೋಗುತ್ತಿದ್ದನು, ವಾಹನವನ್ನು ನೋಡಿ ಗಾಬರಿಯಿಂದ ಓಡಿಹೋಗಲು ಪ್ರಯತ್ನಿಸಿದಾಗ ಆತನನ್ನು ತಡೆಹಿಡಿಯಲಾಯಿತು ಎಂದರೆ ಸರಿಯಲ್ಲ, ಆತನ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್ ನ 95 ಓಸಿ ವಿಸ್ಕಿ ಮದ್ಯದ ಪೌಚುಗಳು ಇದ್ದವು ಎಂದರೆ

ಸರಿಯಲ್ಲ, ಕಾರಣ ಚಾಸಾ-1 ರವರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿ.ಪಿ-1 ರಂತೆ ಪಂಚನಾಮೆಯನ್ನು ಜರುಗಿಸಿ ಅಕ್ರಮ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಪಂಚನಾಮೆ ಬರೆದು ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಇದೇ ರೀತಿ ನಾನು ದಿಃ 17-11-2022 ರಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಮು.ಮಾ-1 ನ್ನೇ ಪೊಲೀಸರು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಪೊಟೋ ಕೂಡ ತಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಊರಿನ ವ್ಯಕ್ತಿ ಇರುವ ಕಾರಣ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ

ವಕೀಲರು ಪಾಟೀಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ .

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>

ಸಿಸಿ ನಂಬರ್ **/202**

ಸಾಕ್ಷಿಯ ಹೆಸರು : ಸಿ.ಡಬ್ಲ್ಯು

ತಂದೆಯ ಹೆಸರು : ಪಿ.ಡಬ್ಲ್ಯು

ವಯಸ್ಸು : ವರ್ಷ

ಉದ್ಯೋಗ :

ವಾಸ ಸ್ಥಳ :

ದಿನಾಂಕಃ**04-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>

ನಾನು 2019 ರಿಂದ 2024 ರವರೆಗೆ

**(**ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ</u>

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

<u>ಮರುವಿಚಾರಣೆ **:**</u> ಇಲ್ಲಃ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.